# ಕರ್ನಾಟಕ ಸರ್ಕಾರ
## ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ,
## ಬೆಂಗಳೂರು-560 001

ಸಂಖ್ಯೆ: ಸಿ1(5) ನಿ32 ಮು.ಶಿ/ಅ/23-24 ದಿನಾಂಕ: 08.06.2023

**ಜ್ಞಾಪನ**

ವಿಷಯ: ಕೆ.ಸಿ.ಎಸ್.ಆರ್ 1956 ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿ ಗ್ರೂಪ್ ಎ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಬಿಡುಗಡೆಗೊಳಿಸಿ ಮುಖ್ಯ ಶಿಕ್ಷಕರ/ ತತ್ಸಮಾನ ವೃಂದಕ್ಕೆ ಸ್ಥಳ ನಿಯುಕ್ತಿಗೊಳಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಪಿ 236 ಡಿ.ಜಿ.ಎಂ 2022, ದಿನಾಂಕ: 16.05.2023 .

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಇಪಿ 236 ಡಿ.ಜಿ.ಎಂ 2022, ದಿನಾಂಕ: 16.05.2023 ರಂತೆ ಶಾಲಾ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ಕೆ.ಸಿ.ಎಸ್.ಆರ್ 1958ರ ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿ ಗ್ರೂಪ್ ಎ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದ, ಶ್ರೀ.ತುಲಸಿರಾಮ ರಾಮಣ್ಣ, ಹಿರಿಯ ಉಪನ್ಯಾಸಕರು, ಡಯಟ್, ಬಳ್ಳಾರಿ ಹಾಗೂ ಶ್ರೀ.ಓಂಕಾರ್ ಶಿವರಾಯ, ಶಿಕ್ಷಣಾಧಿಕಾರಿ, ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೀದರ್ ಜಿಲ್ಲೆ ರವರುಗಳನ್ನು ಬಿಡುಗಡೆಗೊಳಿಸಿ, ಮುಖ್ಯ ಶಿಕ್ಷಕರ/ ತತ್ಸಮಾನ ವೃಂದಕ್ಕೆ ಸ್ಥಳ ನಿಯುಕ್ತಿಗಾಗಿ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು, ಈ ಕಛೇರಿಯಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿರುತ್ತದೆ. ಅದರಂತೆ, ಸದರಿ ಅಧಿಕಾರಿಗಳು ಕ್ರಮವಾಗಿ ದಿನಾಂಕ: 05.06.2023 ಹಾಗೂ 06.06.2023ರಲ್ಲಿ ಆಯುಕ್ತರ ಕಛೇರಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಅದರಂತೆ, ಸ್ಥಳ ಆಯ್ಕೆಗೆ ದಿನಾಂಕ: 08.06.2023ರಂದು ಅವಕಾಶ ನೀಡಿದ್ದಾಗ್ಯೂ, ಕೌನ್ಸಿಲಿಂಗ್ ಹಾಜರಾಗದೇ ಇರುವುದರಿಂದ, ಡಮ್ಮಿ ಕೌನ್ಸೆಲಿಂಗ್ ಮೂಲಕ ಸದರಿ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆಯುಕ್ತರ ಕಛೇರಿ ಕರ್ತವ್ಯದಿಂದ ಬಿಡುಗಡೆಗೊಳಿಸಿ, ಅವರ ಹೆಸರಿನ ಮುಂದೆ ನಮೂದಿಸಿದ ಸ್ಥಳಕ್ಕೆ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ.ಸಂ | ಅಧಿಕಾರಿಯ ಹೆಸರು, ಪದನಾಮ ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಶಾಖೆ | ಸ್ಥಳನಿಯುಕ್ತಿಗೊಳಿಸಿದ ಶಾಲೆಯ ಹೆಸರು ಮತ್ತು ವಿಳಾಸ |
|---|---|---|
| 1 | ಶ್ರೀ.ಓಂಕಾರ್ ಶಿವರಾಯ, ಶಿಕ್ಷಣಾಧಿಕಾರಿ, ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೀದರ್ ಜಿಲ್ಲೆ | ಸರ್ಕಾರಿ ಪ್ರೌಢಶಾಲೆ, ಮುಖ್ಯ ಶಿಕ್ಷಕರು, ಯಾನಗುಂದ, ಔರಾದ, ಬೀದರ್ |
| 2 | ಶ್ರೀ.ತುಲಸಿರಾಮ ರಾಮಣ್ಣ, ಹಿರಿಯ ಉಪನ್ಯಾಸಕರು, ಡಯಟ್, ಬಳ್ಳಾರಿ | ಸರ್ಕಾರಿ ಪ್ರೌಢಶಾಲೆ, ಮುಖ್ಯ ಶಿಕ್ಷಕರು, ಮಂಗಲಗಿ, ಹುಮನಾಬಾದ್, ಬೀದರ್ |

**ಬಿ.ಬಿ.ಕಾವೇರಿ, ಭಾ.ಆ.ಸೇ**
**ಆಯುಕ್ತರು.**

ಇವರಿಗೆ

1. ಸಂಬಂಧಿಸಿದ ಅಧಿಕಾರಿಗಳಿಗೆ.
2. ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಬೀದರ್ /
3. ಉಪನಿರ್ದೇಶಕರು(ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ, ಬಳ್ಳಾರಿ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಗುಲ್ಬರ್ಗಾ.
3. ಮಹಾಲೇಖಪಾಲರು, ಕರ್ನಾಟಕ, ಪಾರ್ಕ್ ವ್ಯೂ ರಸ್ತೆ, ಬೆಂಗಳೂರು.
4. ಕಛೇರಿ ಪ್ರತಿ.